ಎಂಬುದಕ್ಕೆ ಏನಾದರೂ ಸಾಕ್ಷಿಗಳಿವೆಯೇ?" ಎಂದು ಜಡ್ಜ್ ಸಾಹೇಬರು ಕೇಳಿದರು.

"ಇದೆ ಯುವರ್ ಆನರ್. ನನ್ನ ಕಕ್ಷಿದಾರ ಬೆಳಗ್ಗೆ 10 ಗಂಟೆಯಿಂದ 6 ಗಂಟೆವರೆಗೆ ಈ ಸುಂದರಿ ಲಾಡ್ಜ್‌ನಿಂದ 38 ಕಿ.ಮೀ. ದೂರವಿರುವ ಅವನ ಆಫೀಸಿನಲ್ಲಿದ್ದಾನೆ. ಅದಕ್ಕೆ ಅವನ ಆಫೀಸಿನ ಮ್ಯಾನೇಜರ್ ಹಾಗೂ ಸಹೋದ್ಯೋಗಿಗಳು ಸಾಕ್ಷಿಯಾಗಿದ್ದಾರೆ. ಹಾಗೂ ಹಾಜರಿ ಪ್ರಮಾಣ ಪತ್ರ ಇದೆ. 6 ಗಂಟೆಯ ನಂತರ ಅವರ ಆಫೀಸಿನ ಹತ್ತಿರದಲ್ಲಿಯೇ ಇರುವ ಮಾಲ್‌ನಲ್ಲಿ ರಾತ್ರಿ 9 ಗಂಟೆಯವರೆಗೆ ಇದ್ದಾರೆ" ಎಂದರು ಲಾಯರ್.

ಆಗ ಸರ್ಕಾರಿ ವಕೀಲರು "ಇವರ್ ಆನರ್, ಮಾಲ್‌ನಲ್ಲಿ ಸಾವಿರಾರು ಜನ ಇರುತ್ತಾರೆ. ಇವನು ಅಲ್ಲಿದ್ದ ಎಂಬುದಕ್ಕೆ ಗುರುತು ಹಿಡಿಯುವವರು ಯಾರು? ಇದನ್ನು ನಂಬುವ ಸಾಕ್ಷಿಯಾಗಿ ಪರಿಗಣಿಸಬಾರದು ಎಂದು ಕೇಳಿಕೊಳ್ಳುತ್ತೇನೆ" ಎಂದರು.

" ಸ್ವಲ್ಪ ಇರಿ ಸರ್ಕಾರಿ ವಕೀಲರೇ... ಇವನು ಆ ಸಮಯದಲ್ಲಿ ಆ ಮಾಲ್‌ನಲ್ಲಿದ್ದ ಎಂಬುದನ್ನು ಕಣ್ಣಾರೆ ನೋಡಿದ ಎಂದು ಹತ್ತಾರು ಸಾಕ್ಷಿಗಳನ್ನು ಕರೆತರಬಹುದು. ಆದರೆ, ನಾವಿನ್ನೂ ಆ ಕಾಲದಲ್ಲಿಲ್ಲ. ತಂತ್ರಜ್ಞಾನ ಬಹಳ ಮುಂದುವರೆದಿದೆ. ಅವನು ಆ ಸಮಯದಲ್ಲಿ ಮಾಲ್‌ನಲ್ಲಿದ್ದ ಎಂಬುದಕ್ಕೆ ಬಲವಾದ ಸಾಕ್ಷಿಗಳಿವೆ. ಇವನು ಸಂಜೆ 6.15ಕ್ಕೆ ಮಾಲ್‌ನಲ್ಲಿ ಒಂದು ಬಟ್ಟೆ ಅಂಗಡಿಗೆ ಹೋಗಿದ್ದ. ಆ ಅಂಗಡಿಯ ಸಿ.ಸಿ.ಟೀವಿಯಲ್ಲಿ ಇವನ ಚಲನ ವಲನಗಳು ರೆಕಾರ್ಡಾಗಿರುವ ಸಿ.ಡಿ. ತಂದಿದ್ದೇವೆ. ಅದೇ ಅಂಗಡಿಯಲ್ಲಿ ಈತ ಒಂದು ಪ್ಯಾಂಟ್ ಹಾಗೂ ಶರ್ಟ್ ಖರೀದಿಸಿ, ಕ್ರೆಡಿಟ್ ಕಾರ್ಡ್ ಮೂಲಕ ಹಣ ಸಂದಾಯ ಮಾಡಿದ್ದಾನೆ. ಇದು ಆಗಿದ್ದು ಸಂಜೆ 6.54 ಕ್ಕೆ. ಇವನ ಕ್ರೆಡಿಟ್ ಕಾರ್ಡನ್ನು ಬೇರೆಯವರು ಉಪಯೋಗಿಸಲು ಬರುವುದಿಲ್ಲವೇ ಅಂತ ನಮ್ಮ ಸರ್ಕಾರಿ ವಕೀಲರು ಕೇಳಬಹುದು. ಮೈ ಲಾರ್ಡ್ ಆ ಬಿಲ್‌ಗೆ ಈತ ಸಹಿ ಮಾಡಿದ್ದಾನೆ. ಸಿ.ಸಿ.ಟೀವಿಯಲ್ಲಿ ಅದು ಕೂಡ ರೆಕಾರ್ಡ್ ಆಗಿದೆ. ನಂತರ ನನ್ನ ಕಕ್ಷಿದಾರ ಅಲ್ಲಿಯೇ ಸೈಬರ್ ಕೆಫೆಗೆ ಹೋಗಿದ್ದಾನೆ. ಈಗ ಸೈಬರ್ ಕೆಫೆ ಉಪಯೋಗಿಸುವವರ ಐಡೆಂಟಿಟಿ ಬಗ್ಗೆ ದಾಖಲೆ ಇಡುವುದು ಕಡ್ಡಾಯವಾದ್ದರಿಂದ ಆ ಸೈಬರ್ ಕೆಫೆಯಲ್ಲಿ ಈತ ರಾತ್ರಿ 7.12ರಿಂದ 7.43 ರ ವರೆಗೆ ಇದ್ದುದು ದಾಖಲಾಗಿದೆ. ಆ ಸಮಯದಲ್ಲಿ ಇವನು ಕಳುಹಿಸಿರುವ ಇ–ಮೇಲ್‌ಗಳ ಸಮಯ ಕೂಡ ದಾಖಲೆಯಾಗಿ ಅದನ್ನು ಹಾಜರ್ ಪಡಿಸುತ್ತಿದ್ದೇನೆ. ನಂತರ ಮಾಲ್‌ನಲ್ಲಿ ರಾತ್ರಿ 8.08 ಕ್ಕೆ ಎ.ಟಿ.ಎಂ. ನಿಂದ ಹಣ ಡ್ರಾ ಮಾಡಿದ್ದಾನೆ. ಅದರ ರಸೀದಿ ಕೂಡ ಇದೆ. ಅಲ್ಲದೇ ಎ.ಟಿ.ಎಂ.ನ ಸಿ.ಸಿ. ಟೀ.ವಿಯಲ್ಲಿ ಸಹ ಇವನ ಹಾಜರಿ ದಾಖಲಾಗಿರುವುದನ್ನು ಪರಿಶೀಲಿಸಬಹುದು. ನಂತರ ಅಲ್ಲಿಯೇ ಹೋಟೆಲ್ ಒಂದರಲ್ಲಿ ತಿಂಡಿ ತಿಂದು ಕಾಫಿ ಕುಡಿದು, ರಾತ್ರಿ 8.42 ರಲ್ಲಿ ಕ್ರೆಡಿಟ್ ಕಾರ್ಡ್ ಮೂಲಕ ಹಣ ಪಾವತಿಸಿದ್ದಾನೆ. ನಂತರ ಮಾಲ್‌ನಿಂದ ಹೊರಟು ಹತ್ತಿರದ ಸಿಟಿ ಬಸ್‌ಸ್ಟಾಪ್‌ನಲ್ಲಿ ಬಸ್ ಹತ್ತಿದ್ದಾನೆ. ರಾತ್ರಿ 9.06ಕ್ಕೆ ಬಸ್ ಟಿಕೆಟ್ ತೆಗೆದುಕೊಂಡಿರುವ ದಾಖಲೆ ಇದೆ. ರಾತ್ರಿ 9.58ಕ್ಕೆ ಪೊಲೀಸರಿಂದ ಫೋನ್ ಬಂದಿದೆ. ಈತ ಕೂಡಲೇ ಪೊಲೀಸ್ ಸ್ಟೇಷನ್‌ಗೆ ಬಂದಿದ್ದಾನೆ. ಈ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ತಾವು ನನ್ನ ಕಕ್ಷಿದಾರರಾದ ಸುನೀಲ್ ಅವರನ್ನು ಬಿಡುಗಡೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ ಯುವರ್ ಆನರ್" ಎಂದು ಹೇಳಿ ಕುಳಿತರು ಅಂಜನಾಸುತ.

"ನೀವು ಏನು ಹೇಳ್ತೀರ ಸರ್ಕಾರಿ ವಕೀಲರೇ" ಎಂದು ಜಡ್ಜ್ ಸಾಹೇಬರು ಕೇಳಿದರು. ಆಗ ಸರ್ಕಾರಿ ವಕೀಲರು "ಯುವರ್ ಆನರ್, ತಂತ್ರಜ್ಞಾನ ಬಹಳ ಮುಂದುವರೆದಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಕಳ್ಳ ಕಾಕರನ್ನು, ವಂಚಕರನ್ನು ಕಂಡು ಹಿಡಿಯಲು ಬಳಕೆಗೆ ಬಂದ ಈ